# ಗುಬ್ಬಿ ಗೂಡಲ್ಲಿ ಇಣುಕೋಣ ಬಾರಾ

ಮನೆಯ ತಾರಸಿಯ ಮೂಲೆಯಲ್ಲಿ ಗುಬ್ಬಚ್ಚಿಗಳಿಗೊಂದು ಪುಟ್ಟ ಮನೆಯನ್ನು ತೂಗುಹಾಕಿದ್ದೆ. ಕೆಲವೇ ದಿನಗಳಲ್ಲಿ ಗುಬ್ಬಚ್ಚಿಗಳ ಸಂಸಾರವೊಂದು ಅದರಲ್ಲಿ ಸೇರಿದವು. ಮೊದಮೊದಲು ಅಂಜಿಕೆಯಿಂದ ಹಾರಾಡುತ್ತಿದ್ದ ಈ ಹಕ್ಕಿಗಳು ಬರುಬರುತ್ತಾ ಯಾವ ಭಿಡೆಯೂ ಇಲ್ಲದೆ ಅರ್ಜುನ ಬಾಣದಂತೆ ಹೊರಗಿನಿಂದ ನೇರವಾಗಿ ಗೂಡಿಗೆ ಇಳಿಯುತ್ತಿದ್ದವು. ದಿನಕಳೆದಂತೆ ಒಣಹುಲ್ಲು, ಗರಿ ಮುಂತಾದ ಪರಿಕರಗಳನ್ನು ಗೂಡಿನಲ್ಲಿ ಒಪ್ಪವಾಗಿ ಜೋಡಿಸಿ ಮೊಟ್ಟೆ ಇಟ್ಟು ಮರಿ ಮಾಡಿದವು. ನಿತ್ಯ ಅವುಗಳ ಲಾಲನೆ ಪಾಲನೆಯಲ್ಲಿ ಬೆಳೆದು, ಮರಿಗಳು ರೆಕ್ಕೆಬಿಚ್ಚಿ ಬಾನಿಗೆ ಹಾರಿದವು. ಅವು ಹಾರುವಾಗ ಪೋಷಕ ಹಕ್ಕಿಗಳೊಂದಿಗೆ ನಮಗೂ ಒಂದು ಸಾರ್ಥಕಭಾವ ಮೂಡಿತು.

ಇತ್ತ ಖಾಲಿಯಾದ ಗೂಡನ್ನು ಕೆಳಗಿಳಿಸಿ ಅದರ ಒಳವಿನ್ಯಾಸ ಅರಿಯಲು ಮುಂದಾದೆ. ಕಟ್ಟಿಗೆಯ ಹೊರಮೈಯ ಆ ಗೂಡಿನ ಒಳಗೆ ಸುಮಾರು ಅರ್ಧ ಕೆ.ಜಿ.ಯಷ್ಟು ಕಸಬರಿಗೆಯ ಗರಿ ಹಾಗೂ ಒಣಹುಲ್ಲಿನ ಬಣವೆಯಿತ್ತು. ಈ ಅಡಿಪಾಯದ ಮೇಲೆ ಮೃದುವಾದ ವಿವಿಧ ಎಲೆಗಳು ಹಾಗೂ ಹಾವಿನ ಪೊರೆಯ ಹಾಸು ಇತ್ತು. ಅದರ ಮೇಲೆ ಇನ್ನೂ ಮೆತ್ತನೆಯ ಹತ್ತಿ, ಹೂವಿನ ಪಕಳೆ ಹಾಗೂ ಬೇರೆ ಹಕ್ಕಿಗಳ ಪುಕ್ಕಗಳ ಹಾಸುಗೆಯೂ ಇತ್ತು. ಇದಲ್ಲದೆ ಗುಟ್ಕಾ ಪ್ಯಾಕೆಟ್, ಪ್ಲಾಸ್ಟಿಕ್, ಕಾಗದ, ಕೂದಲು, ಬಟ್ಟೆಗಳ ಎಳೆಗಳೂ ತುಂಬಿದ್ದವು. ಇವೆಲ್ಲವನ್ನೂ ಅಚ್ಚುಕಟ್ಟಾಗಿ ಹೊಂದಿಸಿ ಮಾಡಿದ್ದ ಗೂಡಿನಲ್ಲಿ ಮರಿಗಳು ಬೆಚ್ಚಗೆ ಮಲಗಿದ್ದ ಜಾಗದಲ್ಲಿ ಅವುಗಳ ಹಿಕ್ಕೆ ಕಣ್ಣಿಗೆ ರಾಚಿದರೆ, ಅದರ ಘಮಲು ಮೂಗಿಗೆ ಬಡಿಯುತ್ತಿತ್ತು. ಅಂತೂ ಗುಬ್ಬಚ್ಚಿಗಳ ಗೂಡಿನ ವಿನ್ಯಾಸದಲ್ಲಿ ಬಹುತೇಕ ವಸ್ತುಗಳು ಪರಿಸರಸ್ನೇಹಿಯಾಗಿದ್ದು, ಖುಷಿ ನೀಡಿತು. ಜೊತೆಗೆ ನಾವು ಉತ್ಪಾದಿಸಿದ ವಿವಿಧ ತ್ಯಾಜ್ಯಗಳು ಜೀವಿಗಳ ವೈಯಕ್ತಿಕ ಬದುಕಿನಲ್ಲೂ ಸಹ ತೊಂದರೆಯ ಸ್ಥಾನ ಗಳಿಸಿದ್ದನ್ನು ಕಂಡು ಖೇದವೂ ಆಯಿತು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



# ಕಲ್ಲಿನ ಡೋರ್‌ಮ್ಯಾಟ್



ಚಿತ್ರದಲ್ಲಿ ಕಾಣುತ್ತಿರುವುದು ಕಲ್ಲಿನಿಂದ ಮಾಡಿದ ಕಳುವರೇಸು ಅರ್ಥಾತ್ ಡೋರ್ ಮ್ಯಾಟ್. ಪಾದ ಸ್ವಚ್ಛಗೊಳಿಸಲು ಇದನ್ನು ಬಳಸಲಾಗುತ್ತದೆ. ಹಳೆ ಕಾಲದ ಮನೆಗಳ ಮುಂಭಾಗದಲ್ಲಿ ಇಂತಹ ಕಳುವರೇಸು ಕಾಣಬಹುದು. ಪಾದವು ಮಣ್ಣಿನಿಂದ ಕೊಳಕಾಗಿದ್ದರೆ, ಮನೆಯೊಳಗೆ ಪ್ರವೇಶಿಸುವ ಮೊದಲು ಅದನ್ನು ಈ ಕಲ್ಲಿನ ಡೋರ್‌ಮ್ಯಾಟ್‌ಗೆ ಒರೆಸಿ ನಂತರ ಮನೆಯೊಳಗೆ ಬರಲಾಗುತ್ತಿತ್ತು. ಇದು ಕಂಡುಬಂದಿದ್ದು ಮೈಸೂರಿನ ನನ್ನ ಸ್ನೇಹಿತರ ಮನೆಯಲ್ಲಿ.

—ಬಿ.ಕೆ. ಪ್ರಭುದೇವ ರಾಜ್ ಅರಸ್, ಮೈಸೂರು



# ಮೀಸೆ ಹೊತ್ತ ರಾಮ, ವಿಷ್ಣು, ವರುಣ

‘ಬಾಲಿ’ ಹಿಂದೂ ಧರ್ಮೀಯರೇ ಬಹುಸಂಖ್ಯಾತರಾಗಿರುವ ಇಂಡೋನೇಷ್ಯಾದ ಏಕೈಕ ದ್ವೀಪ. ಹಾಗಾಗಿ ಇಲ್ಲಿನ ವೃತ್ತ, ದೇವಾಲಯ, ಸ್ಮಾರಕ, ಭವನಗಳಲ್ಲಿ ಹಿಂದೂ ದೇವದೇವಿಯರ, ಮಹಾಭಾರತ/ರಾಮಾಯಣ ಮಹಾಕಾವ್ಯಗಳಲ್ಲಿ ಬರುವ ಪಾತ್ರಗಳ ವಿಗ್ರಹಗಳನ್ನು ನಿರ್ಮಿಸಲಾಗಿದೆ. ಆದರೆ ಈ ವಿಗ್ರಹಗಳು ನಮ್ಮ ದೇಶದಲ್ಲಿನ ದೇವ ದೇವಿಯರ ವಿಗ್ರಹಗಳಿಗಿಂತ ಭಿನ್ನವಾಗಿವೆ. ನಮ್ಮಲ್ಲಿ ಸಾಮಾನ್ಯವಾಗಿ ರಾಮ, ವಿಷ್ಣು, ಶಿವ, ಇಂದ್ರ, ವರುಣ ಮುಂತಾದ ದೇವರುಗಳ ವಿಗ್ರಹಗಳಲ್ಲಿ ಮೀಸೆ/ಗಡ್ಡಗಳು ಇರುವುದಿಲ್ಲ. ಆದರೆ ಬಾಲಿಯಲ್ಲಿ ನಾವು ನೋಡಿದ ರಾಮ, ವಿಷ್ಣು, ವರುಣರ ವಿಗ್ರಹಗಳಲ್ಲಿ ಮೀಸೆ ಇತ್ತು. ಇದು ಭಾರತೀಯರಿಗೆ, ಅದರಲ್ಲೂ ರವಿವರ್ಮ ರಚಿಸಿರುವ ಚಿತ್ರಗಳಲ್ಲಿ ಚಿತ್ರಿತವಾಗಿರುವ ದೇವ ದೇವಿಯರ ಮುಖಗಳೇ ಮನಸ್ಸಿನಲ್ಲಿ ಅಚ್ಚೊತ್ತಿರುವ ದಕ್ಷಿಣ ಭಾರತೀಯರಿಗೆ ವಿಚಿತ್ರವಾಗಿ ಕಾಣಿಸುತ್ತದೆ.

—ಎಚ್.ಎಸ್. ನಂದಕುಮಾರ್, ಮಂಗಳೂರು